doc-346
T.P-2

(1)

51st Year of Publication ★ SATYAVADI Daily, MYSORE 4

Reg No B G 155 ಶ್ರೀ 2-8-1968

ಪ್ರಮುಖ ನಕ್ಷತ್ರಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಸ್ಥಾಪಕರು : ಅರಮನೆ ಸಿರ್ವಹ್ವೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

Space available

For Permanent Advertisement.

ಆಯೂಬರ ವಿರುದ್ಧ ಪ್ರದರ್ಶನ

ಸತ್ಯವಾದಿ ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ (ಹೊಂಗನೂರು) ರವರೂ ಶುಭಾಶಯಪೂರ್ವಕ ನೆರವನ್ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಅಮೇರಿಕಾದ ಸೇಂಟ್ ಲೂಕ್ ಆಸ್ಪತ್ರೆಯಲ್ಲಿ ತೆರೆದ ಹೃದಯ ಚಿಕಿತ್ಸೆಗೆ 105 ನಿಮಿಷ ಹಿಡಿಯುವುದು : ಮತ್ತು ಅಲ್ಲಿ 9 ದಿನಗಳ ವಾಸಕ್ಕೆ 2200 ಡಾಲರು ಬೀಳುವುದು.

★

ಮೈಸೂರು— ಮುಂಡುನರಿದ ಪುರಸಭಾ ಅಧಿವೇಶನವು ತಾ|| 5 ಸೋಮವಾರ ನಡೆಯುವುದು.

ಮುತ್ತಿನ ಪ್ರಭಾವ

ಮ್ಯೂನಿಚ್— ಒಬ್ಬಳು 47 ವರ್ಷದ ನಿಷ್ಠಾ ಲಾಯರು 41 ವರ್ಷದ ಕಕ್ಷೀಗಾರನನ್ನು ಜೈಲಿನಲ್ಲಿ ನೋಡಲು ಹೋದಾಗ ಆತನು ಇನಳಿಗೆ ಚೆನ್ನಾಗಿ ಮುತ್ತಿಟ್ಟನು : ಆಮೇಲೆ, ನೀನು ಕೊಟ್ಟ ಮುತ್ತು ಬಹಳ ಚೆನ್ನಾಗಿತ್ತು, ಎಂದು ಅವನಿಗೆ ಬರೆದಳು: ಈಕೆಗೆ ಮೂರು ವಾರ ಜೈಲುವಾಸ ವಿಧಿಸಲಾಯಿತು.

★

ಮೈಸೂರು— ಬೀದಿ ನಲ್ಲಿಗಳಲ್ಲಿ ನೀರನ್ನು ನೋಲುಮಾಡಬಾರದೆಂದು ಮಾ ನಿಸಿಪಲ್ ಕಮಿಷನರು ಎಚ್ಚರಿಸಿರುವರು.

ತುಂಡು ಲಂಗ ವಿರುದ್ಧ

ಲೋಮ್— ಅಧ್ಯಕ್ಷರ ಅರಮನೆಗೆ 1 ಸಾವಿರ ಟೋಟೋ ಸುಹಿಳೆಯರು ಸುರಿಯುತ್ತಿದ್ದ ಮಳೆಯಲ್ಲಿ ಹೋಗಿ, ತುಂಡು ಲಂಗ ಮತ್ತು ಕೆಟ್ಟ ಪತ್ರಿಕೆಗಳನ್ನು ಬಹಿಷ್ಕರಿಸಲು ಕೇಳಿಕೆ ಹಾಕಿದರು.

★

ಮೈಸೂರು— ಕೇರಳಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ರೂ. 10000 ಬೆಲೆಯ 73 ಕ್ವಿಂಟಾಲು ಅಕ್ಕಿಯನ್ನು ಮಾಹೂರು ಚೆಕ್‌ಪೋಸ್ಟು ಹತ್ತಿರ ಪೋಲೀಸರು ವಶಪಡಿಸಿಕೊಂಡರು : 3 ಜನರನ್ನು ಬಂಧಿಸಿದರು.



ಅಯೂಬರ ವಿರುದ್ಧ ಪ್ರದರ್ಶನ

ಲಂಡನ್— ಇಲ್ಲಿಗೆ ಹತ್ತಿರದ ಸರ್ರೆಯ ಲ್ಲಿಯ ಹೋಟನಲ್ಲಿ ಳಿದಿರುವ ಪಾಕಿಸ್ತಾನ ಅಯೂಬರ ವಿರುದ ಉರಿಯುವ ಹಂಜಿನ ಪ್ರದರ್ಶನ ನಡೆಸಲಾಯಿತು — ಪಾಕಿ ಸ್ತಾನಕ್ಕೆ ಮತ್ತೆ ಪ್ರಜಾರಾಜ್ಯ ಬರಬೇಕೆಂದು ಘೋಷಿಸಿದರು .... ಅಯೂಬರಿಗೆ ಧಿಕ್ಕಾರ, ಪ್ರೆಸ್ ಸೆನ್ಸಾರ್ ಕೂಡದು ಲೂಟಿ ಕೂಡದು, ಎಂದು ಕೂಗಿದರು.

ಪಶುಪಾಲನೆಗೆ ಮೈಸೂರಿನ ಪ್ರಶಂಸೆ

ಜೆಂಗಳೂರು— ಸೋಮವಾರ ಡೆಲ್ಲಿಯಲ್ಲಿ ನಡೆದ ಪ್ರಪ್ರಥಮ ಪಶುಪಾಲನಾ ಮಂತ್ರಿಗಳ ಸಮ್ಮೇಳನದಲ್ಲಿ, ಅಧ್ಯಕ್ಷತೆ ವಹಿಸಿದ್ದ ಶ್ರೀ ಜಗಜೀವನರಾಂರವರು, ಮೈಸೂರಿನಲ್ಲಿನ ಪಶುಪಾಲನೆ ಮತ್ತು ಕೋಳಿ ಅಭಿವೃದ್ಧಿ ಕಾರ್ಯಗಳಿಗೆ ಸಂತಸಗೊಂಡು ರಾಜ್ಯದ ಎಲ್ಲಾ ಪ್ರಾಜೆಕ್ಟುಗಳನ್ನೂ ಮಂಜೂರ್ಮಾಡಿದರೆಂದು ರಾಜ್ಯದ ಪಶುಪಾಲನಾ ಮಂತ್ರಿ ಶ್ರೀ ಶಂಕರರಾಯರು ಹೇಳಿದರು.

ಉಪವಾಸ

ಹಜಾರಿಬಾಗ್— 1466 ನೇ ಜನವರಿಯಿಂದ ತಮಗೆ ಸಂಬಳ ಕೊಟ್ಟಿಲ್ಲವಾಗಿ ಒಂದು ಮಾಧ್ಯಮ ಶಾಲಾ ಹೆಡ್‌ಮಿಸ್ಟ್ರೆಸ್ ಮತ್ತು 7 ಮಂದಿ ಉಪಾಧ್ಯಾಯಿನಿಯರು ವಿದ್ಯಾಧಿಕಾರಿಗಳ ಆಫೀಸು ಮುಂದೆ ಅನಿರ್ದಿಷ್ಟ ಕಾಲದ ಉಪವಾಸ ಪ್ರಾರಂಭಿಸಿರುವರು.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

'ಕೆಲವರು ವರ್ಣಾಶ್ರಮಧರ್ಮ ವ್ಯವಸ್ಥೆಯಿಂ ಕೆಲವು ಸ್ವಾರ್ಥಜೀವಿಗಳಿಂದ ಉಂಟಾಯಿತೆಂದೂ, ಅದಕ್ಕೆ ಸಂಬಂಧಪಟ್ಟ ಆಚಾರಗಳು ಮೂಢನಂಬಿಕೆಯಿಂದ ಉಂಟಾಗಿರುವದೆಂದೂ, ಅವುಗಳಿಂದ ಯಾವುದೇ ರೀತಿಯು ಪ್ರಯೋಜನವಿಲ್ಲವೆಂದೂ ಹೇಳುತ್ತಾರೆ. ಆಚಾರಗಳನ್ನು ಗೊಡ್ಡು ಆಚಾರಗಳೆಂದೂ, ಮೂಢಸಂಪ್ರದಾಯಗಳೆಂದೂ ತೆಗಳುತ್ತಿದ್ದಾರೆ. ಭಾಷಣಗಳಲ್ಲಿಯೂ, ಲೇಖನಗಳಲ್ಲಿಯೂ ವರ್ಣಾಶ್ರಮ ವ್ಯವಸ್ಥೆ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೂ ವಿಷಕ್ಕಾರುತ್ತಾರೆ. " ವರ್ಣಾಶ್ರಮ ವ್ಯವಸ್ಥೆಯಿಂದಲೇ ನಮ್ಮ ದೇಶ ಧಾರ್ಮಿಕ್ಕೆ ಒಳಗಾಯಿತು ; ನಮ್ಮ ರಾಷ್ಟ್ರದಲ್ಲಿ ಈಗ ಇರುವ, ಉಂಟಾಗುವ ಪ್ರತಿಯೊಂದು ಸಮಸ್ಯೆಗೂ ವರ್ಣಾಶ್ರಮಧರ್ಮ ವ್ಯವಸ್ಥೆಯೇ ಕಾರಣ " ಎಂದು ಹೇಳುತ್ತಾರೆ.

ಇಂತಹ ವಿಪರೀತ ಜ್ಞಾನವುಳ್ಳ ಪಂಡಿತರು ಸಾಮಾನ್ಯವಾಗಿ ಬಾಲ್ಯದಿಂದಲೂ ಆಚಾರಗಳನ್ನು ಅನುಸರಿಸಿದ್ದವರಲ್ಲ ; ನಾಸ್ತಿಕರು, ಅನಾಚಾರಾನಂತರ ಸಹವಾಸದಲ್ಲೇ ಇದ್ದವರು. ಪಾಶ್ಚಾತ್ಯ ಪಂಡಿತರು ನಮ್ಮ ಶಾಸ್ತ್ರಗಳನ್ನು ಭಾಷಾಂತರಿಸಿರುವ ಗ್ರಂಥಗಳನ್ನು ಓದಿ, ತನ್ಮೂಲಕ ನಮ್ಮ ಶಾಸ್ತ್ರಗಳ ಪರಿಚಯ ಮಾಡಿಕೊಂಡಿರುತ್ತಾರೆ. ನಮ್ಮ ಪೂರ್ವಾಚಾರ ಸೂತಿಗೆ ಇವರಲ್ಲಿ ಕವಡೆಯು ಬೆಲೆಯೂ ಇಲ್ಲ ; ಆದರೆ ಒಬ್ಬ ಸಾಮಾನ್ಯ ಪಾಶ್ಚಾತ್ಯನು ಹೇಳಿದ ಮಾತನ್ನು ಕೂಡಲೇ ಒಪ್ಪುತ್ತಾರೆ. ಇಂಥವರಿಂದ ಆಚಾರಗಳ ಬಗ್ಗೆ ಒಳ್ಳೇ ಅಭಿಪ್ರಾಯ ಪಡೆಯಲು ಹೇಗೆ ಸಾಧ್ಯ ?

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi" is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies. Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಅಶೋಕ ಪಿಚರ್ಸ್

ಬಾಲ್ಕನಿ ಕಿಟ್ಟಿಯಣ್ಣ ಮೈಸೂರು

ಎಲ್ಲ ವಿಧದ ಛಾಯಾಚಿತ್ರದ ಕೆಲಸಗಳನ್ನು ನಮ್ಮಲ್ಲಿ ಮಾಡಿಸಿಕೊಳ್ಳಿರಿ

ವುಡ್‌ಲಾಂಡ್ಸ್ ಅಪೋಲೊ 6 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೇರ— ಜನವರಿಯು 5 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾಪೀಠಾಧಿಪತಿಗಳೂ ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಜ್ಞಾನುಸಾರ ಅನುಗ್ರಹ ಕೃಪೆಯಾಶೀರ್ವಾದದೊಡನೆ ಕನ್ನಡನಾಡಿನಲ್ಲಿ ಗೋಹತ್ಯೆಯನ್ನು ತಕ್ಷಣದಿಂದ, ತಕ್ಷಣಾದಾದರೂ, ಪರಿಪೂರ್ಣವಾಗಿ ನಿಲ್ಲಿಸುವಂತೆ ಮಾಡಲು ಸರ್ಕಾರಕ್ಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣೆಯ ಸೌಭಾಗ್ಯವನ್ನು ಎಸಗಿರಿ —

ಗೋರಕ್ಷಣೆಯ ಅಂಚೆಯಣ್ಣೆಗಳನ್ನೂ ಪ್ರೋತ್ಸಾಹಕ ಧನವನ್ನೂ ಮಾಸಿಕನಿಯಮಪೂರ್ವಕವಾಗಿ ಸ್ವೀಕರಿಸಲಾಗುವುದು

ದಯವಿಟ್ಟು ಹಣವನ್ನು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ॥ಪಿ ಎಸ್ ಶಾಸ್ತ್ರಿಯವರ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಜಿ. ಶಾಸ್ತ್ರಿಗಳು, 1080 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗನೂರು

ಗೋರಕ್ಷಣಾ ಅಭಿಯಾನ ಸಮಿತಿಯವರ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣಾ ಅಭಿಯಾನ 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ದುಷ್ಟ ಶಿಕ್ಷಣಕಾಗಿ ಪಾಪಿಗಳಲ್ಲಿ ಪಶ್ಚಾತ್ತಾಪ ಉಕ್ಕಿ ಹರಿಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4